MVC 8873/2024

(SCCH-05) PW-1

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು: ದಿನಾಂಕ 08.10.2025</u>**

**<u>ಪಾಟೀ ಸವಾಲು ಒಂದನೇ ಎದುರುದಾರರ ಪರ ವಕೀಲರಿಂದ:</u>**

ನನಗೆ ಮಧ್ಯಪಾನ ಮಾಡುವ ಅಭ್ಯಾಸ ಇಲ್ಲ. ನನ್ನ ವರಮಾನದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ಅಪಘಾತದಿಂದ ವೈದ್ಯಕೀಯ ವೆಚ್ಚ ರೂ.3 ಲಕ್ಷ ಖರ್ಚಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದ ನನಗೆ ಶಸ್ತ್ರ ಚಿಕಿತ್ಸೆಗೆ ರೂ.3 ಲಕ್ಷ ಖರ್ಚಾಗುತ್ತದೆ ಎಂದು ಹೇಳಿದ್ದರು. ಸದರಿ ರೂ.3 ಲಕ್ಷ ಖರ್ಚಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿ.ಪಿ.11 ರಂತೆ ರೂ.17,628/- ರಷ್ಟು ಮೊತ್ತವನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಟ್ರೈಲರ್ ನೊಂದಣಿಯಾಗಿರಲಿಲ್ಲ ಮತ್ತು ಸದರಿ ಟ್ರೈಲರ್ ಗೆ ಯಾವುದೇ ದಾಖಲೆ ಇರಲಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ನ ಚಾಲಕನ ಮಧ್ಯಪಾನ ಮಾಡಿ ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ ಕಾರಣ ಅಪಘಾತವಾಗಿರುತ್ತದೇ ಹೊರತು ಲಾರಿಯ ಚಾಲಕನ ತಪ್ಪಿ ನಿಂದ ಅಲ್ಲ ಎಂದರೆ ಸರಿಯಲ್ಲ. ನಾನು ಕುಳಿತುಕೊಂಡು ಬರುತ್ತಿದ್ದ ಟ್ರಾಕ್ಟರ್ ಚಾಲಕನ ತಪ್ಪಿ ನಿಂದ ಆದ ಅಪಘಾತದಿಂದ ಪರಿಹಾರ ಪಡೆಯುವ ಉದ್ದೇಶದಿಂದ ಲಾರಿಯ ಚಾಲಕನ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ಪ್ರತಿವಾದಿ ಪತ್ರ ಸಲ್ಲಿಸದೇ ಇರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(Computerized to my dictation in Open Court)

**VIII. Addl. Judge,**
**Court of Small Causes,**
**Bengaluru.**

**ಸಾಕ್ಷಿಯ ಸಹಿಃ**